O.S. NO. 121/2024
PW –1 .
Dated 24–07–2026.

ಸಾಕ್ಷಿಯನ್ನು ಈ ದಿನ ದಿನಾಂಕ 24–07–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ ಬಿ ಎಮ್ ಎಮ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಹಾಜರುಪಡಿಸಿರುವ ದಾಖಲೆಗಳಲ್ಲಿ ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಗಣಕೀಕೃತ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ – 1 ರಿಂದ 4 ಎಂದು, ಮೂಟೇಶನ ನಂ. ಎಚ್ 75 ನೇದ್ದರ ಪ್ರತಿ ನಿಪಿ – 5 ಎಂದು, ಎಮ್ ಆರ್ ನಂ. ಟಿ 157 ನೇದ್ದರ ಪ್ರತಿ ನಿಪಿ – 6 ಎಂದು, ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಕೈಬರಹ ಪಹಣಿ ಪತ್ರಿಕೆಗಳ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ – 7 ರಿಂದ 15 ಎಂದು, ಮೂಟೇಶನ ನಂ. 2911 ಮತ್ತು 2912 ನೇದ್ದರ ದೃಡೀಕೃತ ನಕಲು ನಿಪಿ – 16 ಎಂದು, ಮೂಟೇಶನ ನಂ. 10124 ನೇದ್ದರ ದೃಡೀಕೃತ ನಕಲು ನಿಪಿ – 17 ಎಂದು, ಅಸಲು ದಾವಾ ನಂ. 106/2022 ರಲ್ಲಿಯ ವಾದ ಪತ್ರದ ಪ್ರತಿ ನಿಪಿ – 18 ಎಂದು, ಮೃತರ ಕುಟುಂಬದ ಜೀವಂತ ಸದಸ್ಯರ ದೃಡಿಕರಣ ಪತ್ರಗಳು ನಿಪಿ – 19 ಮತ್ತು 20 ಎಂದು, ಆರ್ ಆರ್ ಟಿ ನಂ. 103/2022 ನೇದ್ದರಲ್ಲಿಯ ತಹಶಿಲ್ದಾರ ಬೈಲಹೊಂಗಲ ರವರ ಆದೇಶದ ಪ್ರತಿ ನಿಪಿ – 21 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

O.S. NO. 121/2024

PW -1 .

Dated 24-07-2026.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.